# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **126** |
| ಸದಸ್ಯರ ಹೆಸರು | : | **ಶ್ರೀ ಪ್ರಕಾಶ್.ಕೆ.ರಾಥೋಡ್** |
| ಉತ್ತರಿಸಬೇಕಾದ ದಿನಾಂಕ | : | **13-09-2021** |
| ಉತ್ತರಿಸುವ ಸಚಿವರು | : | **ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು** |

***

| ಪ್ರಶ್ನೆ | | ಉತ್ತರ | |
|---|---|---|---|
| ಅ) | ರಾಜ್ಯದಲ್ಲಿ ಎಲೆಕ್ಟ್ರಿಕಲ್ ವಾಹನಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅ) | ರಾಜ್ಯದಲ್ಲಿ ಎಲೆಕ್ಟ್ರಿಕಲ್ ವಾಹನಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಈ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಆ) | ಕರ್ನಾಟಕ ಸರ್ಕಾರವು "ವಿದ್ಯುತ್ ವಾಹನ ಮತ್ತು ಇಂಧನ ಶೇಖರಣೆ ನೀತಿ 2017" ಅನ್ನು ಸೆಪ್ಟೆಂಬರ್ 2017 ರಲ್ಲಿ ಜಾರಿಗೊಳಿಸಿದೆ. ಸದರಿ ನೀತಿಯ ಅನುಷ್ಠಾನದ ನಿಟ್ಟಿನಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಿದ್ದು ಹಾಗೂ ಸ್ಥಾಪಿಸಲು ಇತರೆ ಹಲವಾರು ಉಪಕ್ರಮಗಳನ್ನು ಕೈಗೊಂಡಿರುತ್ತದೆ.<br><br>ಕರ್ನಾಟಕ ಸರ್ಕಾರವು ಆಯವ್ಯಯ 2021-22 ರಲ್ಲಿ ಪಿಪಿಪಿ ಆಧಾರದ ಮೇಲೆ ರಾಜ್ಯದಲ್ಲಿ 1000 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಬೆಸ್ಕಾಂ ಸಂಸ್ಥೆಯು ರಾಜ್ಯ ನೋಡಲ್ ಏಜೆನ್ಸಿಯಾಗಿದ್ದು, ಕ್ರಿಯಾ ಯೋಜನೆ ಮತ್ತು ಪ್ರಮಾಣಿತ ಬಿಡ್ಡಿಂಗ್ ದಾಖಲೆಗಳನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ವಿದ್ಯುತ್ ಸರಬರಾಜು ಕಂಪನಿವಾರು ಕೈಗೊಂಡ ಕ್ರಮದ ವಿವರಗಳು ಈ ಕೆಳಗಿನಂತಿದೆ:<br><br>1. <u>ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:</u><br>**a)** ಸಾರಿಗೆ ಇಲಾಖೆಯ ರೂ. 4 ಕೋಟಿ ದೇಣಿಗೆ ಕೊಡುಗೆಯಿಂದ ಬೆಂಗಳೂರಿನಲ್ಲಿ 26 ಡಿಸಿ ಫಾಸ್ಟ್ ಚಾರ್ಜಿಂಗ್ ಘಟಕಗಳನ್ನು ಮತ್ತು 100 ಎಸಿ ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಘಟಕಗಳನ್ನು ಬೆವಿಕಂ ಸ್ಥಾಪಿಸಿದೆ. ಈ EV ಚಾರ್ಜರ್‌ಗಳು ಸಾರ್ವಜನಿಕ ಬಳಕೆಗೆ ಲಭ್ಯವಿದೆ.<br>**b)** ವಿಧಾನಸೌಧ, ವಿಕಾಸ ಸೌಧ ಮತ್ತು ಕೆಇಆರ್‌ಸಿ ಸೇರಿದಂತೆ ಬೆಸ್ಕಾಂ ಮತ್ತು ಇತರೆ ಆವರಣದಲ್ಲಿ ಅಳವಡಿಸಲಾದ ಚಾರ್ಜರ್‌ಗಳ ಸಾರಾಂಶ ಹೀಗಿದೆ: |

| ಚಾರ್ಜರ್ ಪ್ರಕಾರ | 2018 ರಲ್ಲಿ ಸ್ಥಾಪಿಸಿದೆ | 2019 ರಲ್ಲಿ ಸ್ಥಾಪಿಸಿದೆ | ಒಟ್ಟು ಸಂಖ್ಯೆ |
|---|---|---|---|
| ಡಿ.ಸಿ. ಫಾಸ್ಟ್ ಚಾರ್ಜರ್ಗಳು | 4 | 26 | 30 |
| ಎ.ಸಿ. ಸ್ಲೋ ಚಾರ್ಜರ್ಗಳು | 6 | 100 | 106 |
| ಒಟ್ಟು ಸಂಖ್ಯೆ | 10 | 126 | 136 |

**c) ಕೇಂದ್ರ ಸರ್ಕಾರದ ಫೇಮ್ -1 ಯೋಜನೆಯಡಿ ಇವಿ ಚಾರ್ಜಿಂಗ್ ಕೇಂದ್ರಗಳು**

i) FAME-I ಯೋಜನೆಯಡಿ ಬೆಂಗಳೂರು ನಗರದ BESCOM ಮಾಲೀಕತ್ವದ ಸ್ಥಳಗಳಲ್ಲಿ 08 DC ಫಾಸ್ಟ್ ಚಾರ್ಜರ್‌ಗಳನ್ನು ಸ್ಥಾಪಿಸಲು BESCOM ರಾಜಸ್ಥಾನ ಎಲೆಕ್ಟ್ರಾನಿಕ್ಸ್ & ಇನ್ಸ್ಟ್ರುಮೆಂಟ್ಸ್ ಲಿಮಿಟೆಡ್ (REIL) ಗೆ ಅನುಮೋದನೆ ನೀಡಿದೆ.

**d) ಕೇಂದ್ರ ಸರ್ಕಾರದ ಫೇಮ್ -2 ಯೋಜನೆಯಡಿ ಇವಿ ಚಾರ್ಜಿಂಗ್ ಕೇಂದ್ರಗಳು**

i) ಬೃಹತ್ ಕೈಗಾರಿಕೆಗಳ ಇಲಾಖೆಯು, ಕೇಂದ್ರ ಸರ್ಕಾರ ರವರು FAME II ಯೋಜನೆಯಡಿ ರಾಜ್ಯಕ್ಕೆ 172 ಹಾಗೂ ಅದರಲ್ಲಿ ಬೆಂಗಳೂರು ನಗರಕ್ಕೆ 152 ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದೆ. ವಿವರಗಳು ಕೆಳಕಂಡಂತಿವೆ:

| Sl. No. | City | Agency | No. of EVCS allocated | Total |
|---|---|---|---|---|
| 1 | Bengaluru | EESL | 12 | 172 |
| | | REIL | 37 | |
| | | NTPC | 103 | |
| 2 | Gulbarga | Gulbarga Electric Supply Co. | 10 | |
| 3 | Mangalore | REIL | 10 | |

ii) 140 ಸಂಖ್ಯೆಗಳ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು, ಎನ್‌ಟಿಪಿಸಿ ಲಿಮಿಟೆಡ್ ಮತ್ತು ರಾಜಸ್ಥಾನ ಎಲೆಕ್ಟ್ರಾನಿಕ್ಸ್ & ಇನ್ಸ್ಟ್ರುಮೆಂಟ್ಸ್ ಲಿಮಿಟೆಡ್ ಜೊತೆ ಬೆವಿಕಂಪನಿಯು MoU ಕಾರ್ಯಗತಗೊಳಿಸಿದೆ.

iii) 17 ಬೆಸ್ಕಾಂ ಸ್ಥಳಗಳಲ್ಲಿ ರಾಜ್ಯದ ಹೆದ್ದಾರಿಗಳಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು EESLಗೆ ಒಪ್ಪಿಗೆ ನೀಡಿದೆ.

**2. <u>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:</u>**

ಚಾವಿಸನಿನಿ ಒಡೆತನ 2 ಸಂಖ್ಯೆಯ ಸ್ಥಳಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳನ್ನು ಸ್ಥಾಪಿಸಲು ಮೆ॥ ಪಿ.ಜಿ.ಸಿ.ಐ.ಎಲ್, ಗುರುಗ್ರಾಮ್ ರವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

**3. <u>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:</u>**

ಪ್ರಸ್ತುತ, ಫೇಮ್ ಇಂಡಿಯಾ ಹಂತ-2ರ ಅಡಿಯಲ್ಲಿ ಮಂಗಳೂರು ವಿದ್ಯುಚ್ಛಕ್ತಿ

| | | | |
|---|---|---|---|
| | | | ಸರಬರಾಜು ಕಂಪನಿಯ ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿನ 14 ಸಂಖ್ಯೆಯ ಇ.ವಿ. ಚಾರ್ಜಿಂಗ್ ಕೇಂದ್ರಗಳನ್ನು ಹಾಗೂ ಶಿವಮೊಗ್ಗ ವಿಭಾಗದಲ್ಲಿನ 10 ಇ.ವಿ. ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು ಇವರಿಗೆ ದಿನಾಂಕ:19.09.2019ರಂದು ಸಲ್ಲಿಸಲಾಗಿದೆ. ಪ್ರಸ್ತಾವನೆಯು ಪರಿಶೀಲನೆ ಹಂತದಲ್ಲಿದೆ.<br>**4. <u>ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:</u>**<br>ಸ್ಮಾರ್ಟ ಸಿಟಿಗಳಿಗೆ ಆದ್ಯತೆ ನೀಡಿ, ಹೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಗುರುತಿಸಲು ಬೆಸ್ಕಾಂ ಕೋರಿದ್ದರ ಪ್ರಯುಕ್ತ, ಹುಬ್ಬಳ್ಳಿ-ಧಾರವಾಡ ನಗರದಲ್ಲಿ 46 ( ಖಾಸಗಿ- 34, ಸರ್ಕಾರಿ- 12) ಹಾಗೂ ಬೆಳಗಾವಿ ನಗರದಲ್ಲಿ 28 (ಖಾಸಗಿ) ಸ್ಥಳಗಳನ್ನು ಗುರುತಿಸಿದ್ದು, ಮಾಹಿತಿಯನ್ನು ಬೆಸ್ಕಾಂಗೆ ನೀಡಲಾಗಿದೆ.<br>ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಹೆಸ್ಕಾಂ ವ್ಯಾಪ್ತಿಯಲ್ಲಿ 82 ಸರ್ಕಾರಿ ಸ್ಥಳಗಳನ್ನು ಗುರುತಿಸಲಾಗಿದೆ.<br>**5. <u>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ</u>**<br>ಜೆಸ್ಕಾಂ ನಿಗಮ ಕಛೇರಿಯ ಆವರಣದಲ್ಲಿ ಎಲೆಕ್ಟ್ರಿಕಲ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಅಳವಡಿಸಲು ಸ್ಥಳ ಗುರುತಿಸಲಾಗಿದೆ. ಸದರಿ ಕಾಮಗಾರಿಯಲ್ಲಿ 4 ಚಾರ್ಜಿಂಗ್ ಯೂನಿಟ್‌ಗಳನ್ನು ಅಳವಡಿಸಲು ಡಿ.ಪಿ.ಆರ್. ತಯಾರಿಸಲಾಗುತ್ತಿದೆ. |

**<u>ಸಂಖ್ಯೆ: ಎನರ್ಜಿ 204 ಇಬಿಎಸ್ 2021</u>**

**(ವಿ ಸುನಿಲ್ ಕುಮಾರ್)**

**ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ**

**ಸಚಿವರು**